2007–08ರಲ್ಲಿ ತೀರ್ಥಹಳ್ಳಿ ತಾಲ್ಲೂಕಿಗೆ ರೂ. 99.66 ಲಕ್ಷಗಳು, ಶಿಕಾರಿಪುರ ತಾಲ್ಲೂಕಿಗೆ ರೂ. 10.00 ಲಕ್ಷಗಳು, ಸಾಗರ ತಾಲ್ಲೂಕಿಗೆ ರೂ.595.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

2008–09ರಲ್ಲಿ ಶಿವಮೊಗ್ಗ ತಾಲ್ಲೂಕಿಗೆ ರೂ. 189.00 ಲಕ್ಷಗಳು, ಕೊಡಚಾದ್ರಿ ರಸ್ತೆಗೆ ರೂ. 1000.00 ಲಕ್ಷಗಳು, ಹೊಸನಗರ ತಾಲ್ಲೂಕಿಗೆ ರೂ.99.48 ಲಕ್ಷಗಳು, ಸಾಗರ ತಾಲ್ಲೂಕಿಗೆ ರೂ. 766.00 ಲಕ್ಷಗಳು ಸೊರಬ ತಾಲ್ಲೂಕಿಗೆ ರೂ. 25.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

2009–10ರಲ್ಲಿ ಶಿಕಾರಿಪುರ ತಾಲ್ಲೂಕಿಗೆ ರೂ. 101.77 ಲಕ್ಷಗಳು, ಶಿವಮೊಗ್ಗ ತಾಲ್ಲೂಕಿಗೆ ರೂ. 878.83 ಲಕ್ಷಗಳು, ಸಾಗರ ತಾಲ್ಲೂಕಿಗೆ ರೂ. 40.00 ಲಕ್ಷಗಳು, ಸೊರಬಾ ತಾಲ್ಲೂಕಿಗೆ ರೂ. 55.00 ಲಕ್ಷಗಳು ಹಾಗೂ ಹೊಸನಗರ ತಾಲ್ಲೂಕಿಗೆ ರೂ. 10.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ಕಳೆದ 3 ವರ್ಷದಿಂದ ರಾಜ್ಯಕ್ಕೆ ಭೇಟಿ ನೀಡಿದ ಪ್ರವಾಸಿಗರ ಅಂಕಿ ಅಂಶಗಳ ವಿವರಗಳು ಕೆಳಗಿನಂತಿವೆ.

ವರ್ಷ	ದೇಶೀಯ	ವಿದೇಶಿಯ
2007	37825953	534563
2008	37010928	520041
2009	32729679	229847

ಪ್ರವಾಸೋದ್ಯಮದಿಂದ ರಾಜ್ಯಕ್ಕೆ ಪರೋಕ್ಷವಾಗಿ ವಿವಿಧ ಮೂಲಗಳಿಂದ ಆದಾಯ ಬರುತ್ತಿದೆ.

ಈ) ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಜಿಲ್ಲೆಯ ಪ್ರವಾಸಿ ತಾಣಗಳಲ್ಲಿ ಕೈಗೊಳ್ಳಬಹುದಾದ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಇಲಾಖೆಗೆ ಮಾಹಿತಿ ಒದಗಿಸುತ್ತದೆ. ಅನುದಾನದ ಲಭ್ಯತೆಗೆ ಅನುಗುಣವಾಗಿ ಸೂಕ್ತ ಮೂಲಭೂತ ಸೌಕರ್ಯಗಳನ್ನು ಈ ತಾಣಗಳಿಗೆ ಇಲಾಖೆಯು ಕಲ್ಪಿಸಲು ಕ್ರಮ ವಹಿಸುತ್ತಿದೆ.

ಹಾಸನ ಜಿಲ್ಲೆಗೆ ಕಳೆದ 3 ವರ್ಷಗಳಲ್ಲಿ ಶಾಸಕರಿಗೆ ನಿಗದಿಯಾದ ಅನುದಾನ

412(677) ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ) ಮಾನ್ಯ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ

ತಂತ್ರಜ್ಞಾನ ಹಾಗೂ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2008–09, 2009–10 ಮತ್ತು 2010–11ನೇ ವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ ಶಾಸಕರಿಗೆ ನಿಗದಿಯಾದ ಅನುದಾನದ ಮೊತ್ತವೆಷ್ಟು;

ಆ) ಈ ವರ್ಷ ಇದುವರೆವಿಗೆ ಬಿಡುಗಡೆಯಾದ ಅನುದಾನದ ಮೊತ್ತವೆಷ್ಟು; (ಕ್ಷೇತ್ರವಾರು, ವರ್ಷವಾರು ಮಾಹಿತಿ ನೀಡುವುದು)?

ಡಾ॥ ವಿ.ಎಸ್. ಆಚಾರ್ಯ (ಮಾನ್ಯ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಮುಜರಾಯಿ ಸಚಿವರು)

ಅ) ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಆಯವ್ಯಯದಲ್ಲಿ ನಿಗದಿಯಾದ ಅನುದಾನವನ್ನು ಸಮನಾಗಿ ಎಲ್ಲಾ 225 ವಿಧಾನ ಸಭಾ ಕ್ಷೇತ್ರಗಳಿಗೆ ಹಾಗೂ 75 ವಿಧಾನ ಪರಿಷತ್ ಕ್ಷೇತ್ರಗಳಿಗೆ ಬಿಡುಗಡೆ ಮಾಡಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಶಾಸಕರಿಗೆ ಸರಾಸರಿ ತಲಾ ರೂ. 1.00 ಕೋಟಿಯನ್ನು ಪ್ರತಿ ವರ್ಷ ಬಿಡುಗಡೆ ಮಾಡಲಾಗಿದೆ. ಹಾಸನ ಜಿಲ್ಲೆಗೆ ಮಾಡಿದ ಬಿಡುಗಡೆ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಪ್ರತಿ ಶಾಸಕರಿಗೆ 2010–11ನೇ ಸಾಲಿನಲ್ಲಿ ತಲಾ ರೂ. 1.00 ಕೋಟಿ ಬಿಡುಗಡೆ ಮಾಡಲಾಗಿದೆ.

ಅನುಬಂಧ

ಹಾಸನ ಜಿಲ್ಲೆ

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಹೆಸರು	ವರ್ಷ		
		2008–09	**2009–10**	**2010–11**
ಅ) ವಿಧಾನ ಸಭಾ ಕ್ಷೇತ್ರ				
1	ಬೇಲೂರು	50.00	150.00	100.00
2	ಅರಸೀಕೆರೆ	50.00	150.00	100.00
3	ಶ್ರವಣಬೆಳಗೊಳ	50.00	150.00	100.00

4	ಹೊಳೆನರಸೀಪುರ	50.00	150.00	100.00
5	ಅರಕಲಗೂಡು	50.00	150.00	100.00
6	ಹಾಸನ	50.00	150.00	100.00
7	ಸಕಲೇಶಪುರ	50.00	150.00	100.00
ಆ) ವಿಧಾನ ಪರಿಷತ್ ಸದಸ್ಯರ ಹೆಸರು				
1	ಎಸ್.ಎಂ. ಆನಂದ್	50.00	100.00	–
2	ಬಿ.ಆರ್. ಗುರುದೇವ್	50.00	100.00	–
3	ಪಟೇಲ್ ಶಿವರಾಂ	–	50.00	100.00

ಸರ್ಕಾರಿ ಇಲಾಖೆಗಳಲ್ಲಿ ಮಂಜೂರಾದ ಹುದ್ದೆಗಳ ವಿವರ

413(678) ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ವಿವಿಧ ದರ್ಜೆಯ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು;

ಆ) ಹಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು;

ಇ) ಹುದ್ದೆಗಳ ಸಂಖ್ಯೆ ಕಡಿಮೆ ಇರುವುದರಿಂದ ಆಡಳಿತ ಕುಂಠಿತವಾಗಿರುವುದು ನಿಜವಲ್ಲವೇ; ಹಾಗಿದ್ದಲ್ಲಿ, ಹುದ್ದೆಗಳನ್ನು ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಬಿ.ಎಸ್ ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು)

ಅ) ರಾಜ್ಯದ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ವಿವಿಧ ದರ್ಜೆಯ ಒಟ್ಟು 6,98,246 ಮಂಜೂರಾದ ಹುದ್ದೆಗಳಿರುತ್ತವೆ.

ಆ) ಒಟ್ಟು 6,98,246 ಹುದ್ದೆಗಳು ಹಾಲಿ ಅಸ್ತಿತ್ವದಲ್ಲಿರುತ್ತವೆ.

ಇ) ನಿಜವಲ್ಲ. ಆಡಳಿತದ ಅಗತ್ಯತೆಗೆ ಅನುಗುಣವಾಗಿ ಹುದ್ದೆಗಳನ್ನು ಸೃಜಿಸಲಾಗುತ್ತಿದೆ.

ಮಹಾನಗರ ಪಾಲಿಕೆಯ ತ್ಯಾಜ್ಯಗಳನ್ನು ಸುರಿಯುತ್ತಿರುವುದು

415(679) ಶ್ರೀ ಜೆ. ನರಸಿಂಹಸ್ವಾಮಿ (ದೊಡ್ಡಬಳ್ಳಾಪುರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?